# ಗೂಳಿ ಪಳಗಿಸುವುದು

ಜನ, ಭಾಷೆ, ಸಂಸ್ಕೃತಿಯ ವಿಚಾರವಾಗಿ ತಮಿಳುನಾಡು ತನ್ನ ಅನನ್ಯತೆಯನ್ನು ಕಾಲಾಂತರದಿಂದ ಕಾಪಾಡಿಕೊಂಡು ಬಂದಿದೆ. ಅಲ್ಲಿನ ಉಡುಗೆ ತೊಡುಗೆ, ಆಹಾರ, ಹಬ್ಬ ಹರಿದಿನಗಳು ವಿಶಿಷ್ಟವಾಗಿವೆ. ಪೊಂಗಲ್ ಅವರಿಗೆ ವರ್ಷಾರಂಭದ ದಿನ. ತಮ್ಮನ್ನು ಮೂಲನಿವಾಸಿಗಳೆಂದು ಕರೆದುಕೊಳ್ಳುವ ಅವರು ದೇಶದಲ್ಲಿಯೆ ಕಡಿಮೆ ಸಂಕರಕ್ಕೊಳಗಾದವರೆಂಬಂತೆ ಬಿಂಬಿತವಾಗುತ್ತಾರೆ. ಶಾಸ್ತ್ರೀಯ ಸ್ಥಾನ ಮಾನ ಮೊದಲು ಗಿಟ್ಟಿದ್ದು ತಮಿಳು ಭಾಷೆಗೆಯೆ.

ಕೆಲವು ದಿನಗಳಿಂದ ಜಲ್ಲಿಕಟ್ಟು ಎಂಬ ತಮಿಳು ನಾಡಿನ ಗ್ರಾಮೀಣ ಯುವಕರ ನೆಚ್ಚಿನ ಕ್ರೀಡೆ ಸುದ್ದಿಯಲ್ಲಿದೆ. ರಭಸದಿಂದ ನುಗ್ಗುವ ಕೊಬ್ಬಿದ ಗೂಳಿಯ ಕೊಂಬನ್ನು ಹಿಡಿಯಲು ಎಂಟೆದೆ ಬೇಕೇಬೇಕು. ಯಾರೇ ಆದರೂ, ನೂರು ಗುಂಡಿಗೆ ಇದ್ದರೂ ಅದು ತನ್ನ ಕೊನೆ ದಿನವೆಂದೇ ಆಟಕ್ಕಿಳಿಯಬೇಕು. ಅದು ಆಟಕ್ಕಿಂತಲೂ ಸಾವಿನ ಜೊತೆಗೆ ಸರಸವೆಂದೇ ಹೇಳಬೇಕು. ಕಳೆದ ಹತ್ತು ವರ್ಷದಲ್ಲಿ ನೂರು ಮಂದಿ ಸಾವನ್ನಪ್ಪಿದ ದಾಖಲೆಯಿದೆ.

ಈ ಆಟ ಮಾರಣಾಂತಿಕವೆಂದು ಸರ್ವೋಚ್ಚ ನ್ಯಾಯಾಲಯ ಮೂರು ವರ್ಷಗಳ ಹಿಂದೆಯೆ ಅದರ ಮೇಲೆ ನಿಷೇಧ ಹೇರಿದೆ. ಆದರೆ ತಮಿಳರಿಗೆ ಅದು ನೆಲದ ಪ್ರತಿಷ್ಠೆ. ತಮಿಳು ಅಸ್ಮಿತೆಗೆ ಅಪಚಾರವೆಸಗಿದಂತೆ ಕಂಡಿದೆ. ಅದಕ್ಕಾಗಿ ಅವರು ಪ್ರಾಣ ಕೊಡಲು ಸಿದ್ಧರಿದ್ದಾರೆ. ಜನಸಾಮಾನ್ಯರು ಸಾಮಾಜಿಕ ಮಾಧ್ಯಮಗಳ ಮೂಲಕವೇ ನಾಯಕನೇ ಇಲ್ಲದ ಒಂದು ಐತಿಹಾಸಿಕ ಚಳವಳಿಯನ್ನೆ ಹುಟ್ಟುಹಾಕುತ್ತಾರೆ. ಚೆನ್ನೈ ನಗರದ ಮರೀನಾ ಬೀಚಿನಲ್ಲಿ ಯುವಕರು ಸಾಗರೋಪಾದಿಯಲ್ಲಿ ಬಂದು ಜಮಾಯಿಸುತ್ತಾರೆ. ಪ್ರತಿಷ್ಠಿತರು, ಖ್ಯಾತನಾಮರೆಲ್ಲರೂ ಏಕಪ್ರಕಾರವಾಗಿ ದನಿಗೂಡಿಸುತ್ತಾರೆ. ಸರ್ಕಾರ ಸುಗ್ರೀವಾಜ್ಞೆ ಹೊರಡಿಸುತ್ತದೆ. ಆಟ ಶುರುವಾಗುತ್ತದೆ. ಅಂದೇ ಪುದುಕೋಟೆಯಲ್ಲಿ ಇಬ್ಬರು ಸಾವನ್ನಪ್ಪುತ್ತಾರೆ. ಆದರೆ, ಅವರಿಗದು ದೊಡ್ಡಸುದ್ದಿಯೆನಿಸುವುದಿಲ್ಲ.

ಕ್ರಿಸ್ತಪೂರ್ವದಲ್ಲಿಯೆ ಈ ಆಟ ಪ್ರಚಲಿತವಿತ್ತು ಎನ್ನುವುದಾದರೆ ಇದೊಂದು ಸಾಂಕೇತಿಕ ಆಟವೆಂತೆ ಪ್ರಾರಂಭವಾಗಿರಬೇಕು. ನನಗೆ ಇದನ್ನು ಯಾರೋ ಒಬ್ಬ ಬೌದ್ಧ ಸನ್ಯಾಸಿಯೆ ಕಲಿಸಿಕೊಟ್ಟಿರಬೇಕು ಎನಿಸುತ್ತಿದೆ. ಯಾಕೆಂದರೆ ಜೆನ್ ಬೌದ್ಧರು ಗೂಳಿಯನ್ನು ಮನಸ್ಸಿಗೆ ಹೋಲಿಸುತ್ತಾರೆ. ಮನಸ್ಸೆಂಬುದು ಕೊಬ್ಬಿದ ಗೂಳಿ. ಅದು ವಿಷಯಾಸಕ್ತ. ಆಸೆಯಾಮಿಷಗಳತ್ತ ಗುಟುರು ಹಾಕುತ್ತಾ ಓಡುತ್ತದೆ. ಅದನ್ನು ಮಣಿಸಲು ಏಕಾಗ್ರತೆ, ದೃಢತೆ, ಯುಕ್ತಿ ಎಲ್ಲವನ್ನೂ ಬಳಸಬೇಕಾಗುತ್ತದೆ.

ಹನ್ನೆರಡನೆಯ ಶತಮಾನದಲ್ಲಿ ಕಾಕುನ್ ಎಂಬ ಚೀನಾ ದೇಶದ ಜೆನ್ ಗುರು ಹಲವು ಭಂಗಿಯ ಹತ್ತು ಗೂಳಿಯ ಚಿತ್ರಗಳನ್ನು ಬಿಡಿಸಿ (ಅವುಗಳನ್ನು ತಾವೋ ಗೂಳಿಗಳು ಎಂತಲೂ ಕರೆಯುತ್ತಾರೆ) ಪ್ರತಿಯೊಂದು ಚಿತ್ರದ ಕೆಳಗೆ ಅದರ ಸಂಕ್ಷಿಪ್ತ ವ್ಯಾಖ್ಯಾನವನ್ನೂ ಬರೆಯುತ್ತಾನೆ. ಗೂಳಿ ಮನಸ್ಸಿನ ಸಂಕೇತ. ಪಳಗದ ಮನಸ್ಸು ಕೊಬ್ಬಿದ ಗೂಳಿಯಂತೆಯೆ ವರ್ತಿಸುವುದು ಸಹಜ. ವ್ಯಕ್ತಿಯ ಮನಸ್ಸನ್ನು ಕಾಡುವ ಮೂರು ಮಹಾ ಶತ್ರುಗಳು ಲೋಭ, ಮೋಹ ಮತ್ತು ದ್ವೇಷ ಎಂದು ಬುದ್ಧ ಹೇಳುತ್ತಾನೆ. ಈ ಮೂರರಿಂದ ಮುಕ್ತನಾಗದಿದ್ದರೆ ಅವನು ತನ್ನನ್ನು ತಾನೆ ಕಳೆದುಕೊಳ್ಳುತ್ತಾನೆ ಅಥವಾ ತಾನೇ ತನ್ನಿಂದ ಬೇರ್ಪಡಿಸಲ್ಪಡುತ್ತಾನೆ. ಆಗ ತನ್ನ ಮೂಲ ಪ್ರವೃತ್ತಿ ಯಾವುದು, ಎಲ್ಲಿ ಎಂದು ಹುಡುಕತೊಡಗುತ್ತಾನೆ. ಹೇಗೆಂದರೆ ಹುಲ್ಲುಗಾವಲಿನಲ್ಲಿ ಗೂಳಿ ಒಂಟಿಯಾಗಿ ನುಗ್ಗಿ ಹುಲ್ಲನ್ನು ಸೀಳಿಕೊಂಡು ಮುನ್ನುಗ್ಗುವಂತೆ ನುಗ್ಗಿ ಹುಡುಕತೊಡಗುತ್ತಾನೆ.

ಬುದ್ಧನ ಉಪದೇಶಗಳ ಅವಶ್ಯಕತೆ ಬೀಳುವುದು ಇಲ್ಲಿಯೆ. ಉಪದೇಶಗಳನ್ನು ಆಲಿಸುವಾಗ ಓದುವಾಗ, ಮನನ ಮಾಡುವಾಗ ಅವನಿಗೆ ಗೂಳಿಯ ಹೆಜ್ಜೆ ಗುರುತುಗಳು ಕಾಣಿಸುತ್ತವೆ. ಅಂತರ್ಮುಖಿಯಾಗಿ ಮನಸ್ಸಿನ ಚಲನೆಯನ್ನು ತದೇಕಚಿತ್ತದಿಂದ ನೋಡಲು ಕಲಿಯುತ್ತಾನೆ. ಇನ್ನೊಬ್ಬರು ಗಮನಿಸುತ್ತಿದ್ದಾರೆ ಎಂಬುದು ಅರಿವಿಗೆ ಬಂದು ಮನಸ್ಸು ತನ್ನ ವರ್ತನೆಯನ್ನು ಬದಲಾಯಿಸಿಕೊಳ್ಳುತ್ತದೆ. ಚಲನೆ ಮಂದ್ರವಾಗಿ ಶಾಂತ ಸ್ಥಿತಿಗೆ ತಲುಪುತ್ತದೆ. ಇಂದ್ರಿಯಗಳು ಸಮತೋಲಕ್ಕೆ ಬಂದಾಗ ಮನಸ್ಸು ಎಳೆ ಬಿಸಿಲು, ತಂಪು ಗಾಳಿಗೆ ತೆರೆದುಕೊಂಡ ಹಾಗೆ ಹಸಿರು ತುಂಬಿದ ವಿಶಾಲವಾದ ಬಯಲಿಗೆ ಬಂದ ಅನುಭವವಾಗುತ್ತದೆ. ಅಲ್ಲಿ ಗೂಳಿ ಕಾಣಿಸಿಕೊಳ್ಳಲೇಬೇಕು. ಆತ್ಮಪ್ರತ್ಯಯ ಉಂಟಾಗುವುದೇ ಹಾಗೆ.

ಮುಂದಿನ ಹಂತದಲ್ಲಿ ಅವನು ಗೂಳಿಯನ್ನು ಪಳಗಿಸುತ್ತಾನೆ. ಆಗ ಅವನಿಗೆ ಚಾಟಿ ಮತ್ತು ಹಗ್ಗದ ಅವಶ್ಯಕತೆ ಬೀಳುತ್ತದೆ. ಪಳಗಿಸುವುದೆಂದರೆ ಮೂಗುದಾರ ಇಲ್ಲದೆಯೂ ಒಡೆಯನ ಮಾತನ್ನು ಪಾಲಿಸುವಂತೆ ಮಾಡುವುದು. ವಿಧೇಯವಾಗಿಸುವುದು. ಮನಸ್ಸಿನೊಳಗಡೆ ಆಲೋಚನೆಗಳು ಅಲೆಗಳ ಹಾಗೆ. ಒಂದಾದಮೇಲೆ ಒಂದರಂತೆ ಏಳುತ್ತವೆ. ಲೋಭ, ಮೋಹ, ದ್ವೇಷದಿಂದ ಬಂಧಿತನಾದವನಿಗೆ ಅಲೆಗಳು ಶಾಂತವಾಗಿರಲಾರವು. ಅವುಗಳಿಂದ ಬಿಡಿಸಿಕೊಂಡಾಗಲೇ ಗೂಳಿ ಪಳಗುವುದು, ಸ್ವಸ್ಥಾನಕ್ಕೆ ಮರಳುವುದು. ಅಲ್ಲಿ ಚಾಟಿ, ಹಗ್ಗ, ಗೂಳಿ ಮತ್ತು ವ್ಯಕ್ತಿ ಎಲ್ಲವೂ ಒಂದಾಗುತ್ತವೆ. ಮನಸ್ಸು ತನ್ನ ಮಿತಿಗಳಿಂದ ದೂರವಾಗುತ್ತದೆ. ಅದು ಅರಿವಿನ ಸ್ಥಿತಿ, ನಿಃಶೂನ್ಯ ಸ್ಥಿತಿ. ಲೋಭ, ಮೋಹ, ದ್ವೇಷಗಳ ಜಾಗವನ್ನು ಮೈತ್ರಿ, ಕರುಣೆ, ಮುದಿತ (ಇತರರ ಏಳಿಗೆಯಲ್ಲಿ ಸಂತೋಷಪಡುವುದು) ಆಕ್ರಮಿಸಿಕೊಳ್ಳುತ್ತವೆ. ಬದುಕು ಸುಂದರವಾಗುತ್ತದೆ.

■ ಮೂಚಿ

## ಮಾತೇ ಮುತ್ತು

★ ಜ್ಞಾನವಿಲ್ಲದ ಬದ್ಧತೆ ದುರ್ಬಲ ಹಾಗೂ ನಿಷ್ಪ್ರಯೋಜಕ. ಬದ್ಧತೆ ಇಲ್ಲದ ಜ್ಞಾನ ಅಪಾಯಕಾರಿ.

–ಸ್ಯಾಮುವೆಲ್ ಜಾನ್ಸನ್

★ ಯಾವಾಗ ಯುದ್ಧ ಮಾಡಬೇಕು, ಯಾವಾಗ ಯುದ್ಧ ಮಾಡಬಾರದು ಎನ್ನುವುದು ಗೊತ್ತಿದ್ದವನು ಮಾತ್ರ ಯುದ್ಧದಲ್ಲಿ ಗೆಲ್ಲಬಲ್ಲ.

–ಸನ್ ತ್ಸು

★ ನಿಮ್ಮಲ್ಲೇ ನಿಮಗೆ ನಂಬಿಕೆ ಇಲ್ಲವಾದಲ್ಲಿ ನೀವು ದೇವರನ್ನು ನಂಬಲಾರಿರಿ.

–ಸ್ವಾಮಿ ವಿವೇಕಾನಂದ

★ ಕಾರು ಚಲಾಯಿಸಲು ಡ್ರೈವಿಂಗ್ ಕಲಿತರೆ ಸಾಕು; ಚಲನೆಯ ನಿಯಮಗಳ ಅಧ್ಯಯನದ ವಿಜ್ಞಾನದ ಪದವಿ ಪಡೆಯಬೇಕಿಲ್ಲ.

–ಸ್ಟೀವ್ ಜಾಬ್ಸ್

★ ಪ್ರೀತಿಯಲ್ಲಿ ಬಿದ್ದಾಗ ನೋವುಗಳಿಂದ ರಕ್ಷಣೆ ಪಡೆಯಲು ಆಗುವುದಿಲ್ಲ.

–ಸಿಗ್ಮಂಡ್ ಫ್ರಾಯ್ಡ್

★ ನಮಗೆ ಯಾವುದು ಒಳ್ಳೆಯದೆಂದು ದೇವರಿಗೆ ಗೊತ್ತಿದೆ. ನಾವು ಎಲ್ಲರಿಗಾಗಿ ಪ್ರಾರ್ಥಿಸೋಣ.

–ಸಾಕ್ರೆಟಿಸ್

★ ಪ್ರೀತಿಸುವುದು ಎಂದರೆ ಇನ್ನೊಬ್ಬರ ಮೇಲೆ ಹಕ್ಕು ಸಾಧಿಸುವುದಲ್ಲ; ಇನ್ನೊಬ್ಬರಿಗೆ ಸ್ವಾತಂತ್ರ್ಯ ನೀಡುವುದು.

–ರಬೀಂದ್ರನಾಥ ಟ್ಯಾಗೋರ್

★ ವಸ್ತುಗಳ ಮೌಲ್ಯದ ಬಗ್ಗೆ ನಿಮಗೆ ಚೆನ್ನಾಗಿ ಗೊತ್ತಿದೆ. ಆದರೆ ನಿಮ್ಮ ಆತ್ಮದ ಮೌಲ್ಯಗಳ ಬಗ್ಗೆ ಗೊತ್ತಿಲ್ಲದೆ ಇದ್ದರೆ ಮೂರ್ಖರೇ ಸರಿ.

–ರೂಮಿ

★ ಆಳವಾದ ಕಣಿವೆಯಲ್ಲಿ ಇದ್ದವನಿಗೆ ಮಾತ್ರ ಪರ್ವತದ ತುದಿಯಲ್ಲಿರುವುದರ ಮಹತ್ವ ಗೊತ್ತಿರುತ್ತದೆ.

–ರಿಚರ್ಡ್ ನಿಕ್ಸನ್

★ ಹೆಣ್ಣುಮಕ್ಕಳೇ ಜಗತ್ತನ್ನು ಆಳಿದ್ದರೆ ಯುದ್ಧಗಳೇ ನಡೆಯುತ್ತಿರಲಿಲ್ಲ. ನಿರಂತರ ಮಾತುಕತೆಯಷ್ಟೇ ನಡೆಯುತ್ತಿತ್ತು.

–ರಾಬಿನ್ ವಿಲಿಯಮ್ಸ್

★ ಸಂತೋಷ ಎನ್ನುವುದು ಬಾಹ್ಯ ವಸ್ತುಗಳಲ್ಲಿ ಇಲ್ಲ. ನಮ್ಮೊಳಗೇ ಇದೆ.

–ರಿಚರ್ಡ್ ವ್ಯಾಗ್ನರ್

★ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವವನ್ನು ಕಲಿಸುವ ಧರ್ಮವನ್ನು ಮಾತ್ರ ನಾನು ಮೆಚ್ಚುತ್ತೇನೆ.

–ಡಾ.ಬಿ.ಆರ್.ಅಂಬೇಡ್ಕರ್